**Signature and Name of Invigilator**

1. (Signature) ______________________

(Name) ______________________

2. (Signature) ______________________

(Name) ______________________

**OMR Sheet No. :** ...............................................
(To be filled by the Candidate)

**Roll No.** | | | | | | | | |
(In figures as per admission card)

**Roll No.** ______________________
(In words)

**D 2 1 1 5**

# PAPER - III
# KANNADA

**Time : 2½ hours]** **[Maximum Marks : 150**

Number of Pages in this Booklet : **16** Number of Questions in this Booklet : **75**

## Instructions for the Candidates

1. Write your roll number in the space provided on the top of this page.
2. This paper consists of seventy five multiple choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of this cover page. Do not accept a booklet without sticker seal and do not accept an open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
   (iii) After this verification is over, the Test Booklet Number should be entered on the OMR Sheet and the OMR Sheet Number should be entered on this Test Booklet.
4. Each item has four alternative responses marked (1), (2), (3) and (4). You have to darken the circle as indicated below on the correct response against each item.
   **Example :** ① ② ● ④ where (3) is the correct response.
5. Your responses to the items are to be indicated in the **OMR Sheet given inside the Booklet only.** If you mark your response at any place other than in the circle in the OMR Sheet, it will not be evaluated.
6. Read instructions given inside carefully.
7. Rough Work is to be done in the end of this booklet.
8. If you write your Name, Roll Number, Phone Number or put any mark on any part of the OMR Sheet, except for the space allotted for the relevant entries, which may disclose your identity, or use abusive language or employ any other unfair means, such as change of response by scratching or using white fluid, you will render yourself liable to disqualification.
9. You have to return the original OMR Sheet to the invigilators at the end of the examination compulsorily and must not carry it with you outside the Examination Hall. You are however, allowed to carry original question booklet and duplicate copy of OMR Sheet on conclusion of examination.
10. **Use only Blue/Black Ball point pen.**
11. **Use of any calculator or log table etc., is prohibited.**
12. **There are no negative marks for incorrect answers.**

## परीक्षार्थियों के लिए निर्देश

1. इस पृष्ठ के ऊपर नियत स्थान पर अपना रोल नम्बर लिखिए।
2. इस प्रश्न पत्र में पचहत्तर बहुविकल्पीय प्रश्न हैं।
3. परीक्षा प्रारम्भ होने पर, प्रश्न पुस्तिका आपको दे दी जायेगी। पहले पाँच मिनट आपको प्रश्न पुस्तिका खोलने तथा उसकी निम्नलिखित जाँच के लिए दिये जायेंगे, जिसकी जाँच आपको अवश्य करनी है :
   (i) प्रश्न पुस्तिका खोलने के लिए पुस्तिका पर लगी कागज की सील को फाड़ लें। खुली हुई या बिना स्टीकर सील की पुस्तिका स्वीकार न करें।
   (ii) **कवर पृष्ठ पर छपे निर्देशानुसार प्रश्न-पुस्तिका के पृष्ठ तथा प्रश्नों की संख्या को अच्छी तरह चैक कर लें कि ये पूरे हैं। दोषपूर्ण पुस्तिका जिनमें पृष्ठ/प्रश्न कम हों या दुबारा आ गये हों या सीरियल में न हों अर्थात किसी भी प्रकार की त्रुटिपूर्ण पुस्तिका स्वीकार न करें तथा उसी समय उसे लौटाकर उसके स्थान पर दूसरी सही प्रश्न-पुस्तिका ले लें। इसके लिए आपको पाँच मिनट दिये जायेंगे। उसके बाद न तो आपकी प्रश्न-पुस्तिका वापस ली जायेगी और न ही आपको अतिरिक्त समय दिया जायेगा।**
   (iii) इस जाँच के बाद प्रश्न पुस्तिका का नंबर OMR पत्रक पर अंकित करें और OMR पत्रक का नंबर इस प्रश्न पुस्तिका पर अंकित कर दें।
4. प्रत्येक प्रश्न के लिए चार उत्तर विकल्प (1), (2), (3) तथा (4) दिये गये हैं। आपको सही उत्तर के वृत्त को पेन से भरकर काला करना है जैसा कि नीचे दिखाया गया है।
   **उदाहरण :** ① ② ● ④ जबकि (3) सही उत्तर है।
5. प्रश्नों के उत्तर **केवल प्रश्न पुस्तिका के अन्दर दिये गये OMR पत्रक पर ही** अंकित करने हैं। यदि आप OMR पत्रक पर दिये गये वृत्त के अलावा किसी अन्य स्थान पर उत्तर चिन्हांकित करते हैं, तो उसका मूल्यांकन नहीं होगा।
6. अन्दर दिये गये निर्देशों को ध्यानपूर्वक पढ़ें।
7. कच्चा काम (Rough Work) इस पुस्तिका के अन्तिम पृष्ठ पर करें।
8. यदि आप OMR पत्रक पर नियत स्थान के अलावा अपना नाम, रोल नम्बर, फोन नम्बर या कोई भी ऐसा चिह्न जिससे आपकी पहचान हो सके, अंकित करते हैं अथवा अभद्र भाषा का प्रयोग करते हैं, या कोई अन्य अनुचित साधन का प्रयोग करते हैं, जैसे कि अंकित किये गये उत्तर को मिटाना या सफेद स्याही से बदलना तो परीक्षा के लिये अयोग्य घोषित किये जा सकते हैं।
9. आपको परीक्षा समाप्त होने पर मूल OMR पत्रक निरीक्षक महोदय को लौटाना आवश्यक है और परीक्षा समाप्ति के बाद उसे अपने साथ परीक्षा भवन से बाहर न लेकर जायें। हालांकि आप परीक्षा समाप्ति पर मूल प्रश्न पुस्तिका तथा OMR पत्रक की डुप्लीकेट प्रति अपने साथ ले जा सकते हैं।
10. **केवल नीले/काले बाल प्वाईंट पेन का ही इस्तेमाल करें।**
11. **किसी भी प्रकार का संगणक (कैलकुलेटर) या लाग टेबल आदि का प्रयोग वर्जित है।**
12. **गलत उत्तरों के लिए कोई नकारात्मक अंक नहीं हैं।**



www.examrace.com

# KANNADA

# ಕನ್ನಡ

## PAPER - III

## ಪತ್ರಿಕೆ - III

**Note :** This paper contains **seventy five (75)** objective type questions of **two (2)** marks each. **All** questions are **compulsory**.

**ಸೂಚನೆ :** ಈ ಪತ್ರಿಕೆಯಲ್ಲಿ **ಎಪ್ಪತ್ತೈದು (75)** ವಸ್ತುನಿಷ್ಠ ಪ್ರಶ್ನೆಗಳಿರುತ್ತವೆ. ಪ್ರತಿಯೊಂದು ಪ್ರಶ್ನೆಗೂ **ಎರಡು (2)** ಅಂಕಗಳಿರುತ್ತವೆ. **ಎಲ್ಲಾ** ಪ್ರಶ್ನೆಗಳಿಗೂ **ಉತ್ತರಿಸಿ.**

**ಏಕ ಆಯ್ಕೆಯ ಮಾದರಿಯ ಪ್ರಶ್ನೆಗಳು :**

**1.** ಪ್ರಾಚೀನ ಪದ **'ನರಿದಾವಳೆ'** ಎನ್ನುವುದು :

(1) ಸ್ಥಳದ ಹೆಸರು (2) ಹಣ್ಣಿನ ಹೆಸರು

(3) ವೀಳೆಯದ ಎಲೆಯ ಹೆಸರು (4) ಪ್ರಾಣಿಯ ಹೆಸರು

**2.** **"ಕಾಲಾಯಾಸದಿಂ ವಿನಿರ್ಮಿಸಿದ ಕಂಠಿಕೆ ಕಾಂಚನಮಾಲೆಯಂತುಪಾಧೇಯಮಕ್ಕುಮೇ"** – ಈ ಉಕ್ತಿ ಬರುವ ಕೃತಿ :

(1) ಸಾಹಸಭೀಮ ವಿಜಯ (2) ರಾಮಚಂದ್ರ ಚರಿತಪುರಾಣ

(3) ವಿಕ್ರಮಾರ್ಜುನ ವಿಜಯ (4) ವಡ್ಡಾರಾಧನೆ

**3.** **'ಹಲಸಂಗಿ ಗೆಳೆಯ'** ರಲ್ಲಿ ಇವರು ಒಬ್ಬರು :

(1) ಕೆ.ವಿ. ಲಿಂಗಪ್ಪ (2) ಅರ್ಚಕ ರಂಗಸ್ವಾಮಿ

(3) ಧೂಲಾಸಾಹೇಬ (4) ಮತಿಘಟ್ಟ ಕೃಷ್ಣಮೂರ್ತಿ

**4.** ವಚನ ಸಾಹಿತ್ಯವನ್ನು ಮೊದಲಿಗೆ ಶಾಸ್ತ್ರೀಯವಾಗಿ ಸಂಪಾದಿಸಿದವರು :

(1) ಎಸ್.ಸಿ. ನಂದೀಮಠ (2) ಎಂ.ಎ. ರಾಮಾನುಜ ಅಯ್ಯಂಗಾರ್

(3) ಎಂ.ಎಂ. ಕಲಬುರ್ಗಿ (4) ಫ.ಗು. ಹಳಕಟ್ಟಿ

**5.** ಇವುಗಳಲ್ಲಿ ವಿಷ್ಣುಗಣ ಯಾವುದು ?

(1) ಪರಶಿವ (2) ಮಹಾತ್ಮ (3) ಸಮಾನ (4) ತುಲಸಿ



www.examrace.com

6. ಇದು ಕನ್ನಡದ ಒಂದು ಪ್ರಾದೇಶಿಕ ಪ್ರಭೇದ :

(1) ಸೋಲಿಗರ ಕನ್ನಡ (2) ಗುಲಬರ್ಗ ಕನ್ನಡ (3) ನಡುಗನ್ನಡ (4) ಬ್ಯೆರ ಕನ್ನಡ

7. ದ್ರಾವಿಡ ಭಾಷೆಗಳ ಲಿಂಗವ್ಯವಸ್ಥೆಯ ತಳಹದಿ :

(1) ದೊಡ್ಡಗಾತ್ರ – ಚಿಕ್ಕಗಾತ್ರ (2) ಗಂಡು – ಹೆಣ್ಣು

(3) ಸಬುದ್ಧಿಕ – ಅಬುದ್ಧಿಕ (4) ಸಜೀವ – ನಿರ್ಜೀವ

8. 'ನಿನಗೊರ್ವಂಗಲ್ಲ ವಸ್ಥಾಂತರಮಮರಜನಕ್ಕಮೀಪಾಂಗೆ' ಎಂಬ ಮಾತು ಬರುವ ಕೃತಿ :

(1) ಅಜಿತನಾಥ ಪುರಾಣ (2) ಶಾಂತಿ ಪುರಾಣ

(3) ಮಲ್ಲಿನಾಥ ಪುರಾಣ (4) ಆದಿ ಪುರಾಣ

9. ಬಿಲ್ಲೇಶ ಬೊಮ್ಮಯ್ಯನ ಕತೆ ಬರುವ ಕೃತಿ :

(1) ಸಿದ್ಧರಾಮ ಚರಿತೆ (2) ಹರಿಶ್ಚಂದ್ರ ಕಾವ್ಯಂ

(3) ಬಸವರಾಜ – ದೇವರ ರಗಳೆ (4) ಗಿರಿಜಾ ಕಲ್ಯಾಣ

10. ರುದ್ರನಾಟಕದ ಕಲ್ಪನೆಯನ್ನು ಕನ್ನಡ ವಿಮರ್ಶೆಯಲ್ಲಿ ಮೊದಲಿಗೆ ತಂದವರು :

(1) ತೀ.ನಂ.ಶ್ರೀ. (2) ಬಿ.ಎಂ.ಶ್ರೀ (3) ಎಸ್.ವಿ. ರಂಗಣ್ಣ (4) ದ.ರಾ. ಬೇಂದ್ರೆ

11. ಬಾಣನ ಕಾದಂಬರಿಯನ್ನು ಕನ್ನಡಕ್ಕೆ ಅನುವಾದಿಸಿದವರು :

(1) ಪರಮೇಶ್ವರಭಟ್ಟ (2) ಗಂಗಾಧರ ಮಡಿವಾಳೇಶ್ವರ ತೂರಮಕಿ

(3) ಹಟ್ಟಂಗಡಿ ನಾರಾಯಣರಾವ್ (4) ದ.ರಾ. ಬೇಂದ್ರೆ

12. ಅಕ್ಕಮಹಾದೇವಿಯ ಬದುಕನ್ನು ಆಧರಿಸಿದ ಕಾವ್ಯ :

(1) ವಚನೋದ್ಯಾನ (2) ವಚನ ಚಂದ್ರಿಕೆ (3) ಭವ್ಯಮಾನವ (4) ಕದಳಿಯ ಕರ್ಪೂರ

13. ಸ್ತ್ರೀ ವ್ಯಕ್ತಿತ್ವದ ವಿಕಾಸವನ್ನು ಪ್ರತಿಪಾದಿಸುವ ವಸ್ತುವನ್ನುಳ್ಳ ಕಾದಂಬರಿ :

(1) ಮಾಧವಿ (2) ಚಿರಸ್ಮರಣೆ (3) ಬೆಕ್ಕಿನಕಣ್ಣು (4) ವಾತ್ಸಲ್ಯ ಪಥ



www.examrace.com

14. ಇದು ಶೇಕ್ಸ್‌ಪಿಯರ್‌ನ 'ಟೇಮಿಂಗ್ ಆಫ್ ದಿ ಶ್ರೂ' ನಾಟಕದ ಅನುವಾದ :

(1) ಚಂಡಿಮರ್ದನ ನಾಟಕಂ (2) ಹೇಮಚಂದ್ರ ವಿಲಾಸ

(3) ಶೂರಸೇನ ಚರಿತೆ (4) ಪ್ರಮಿಳಾರ್ಜುನೀಯ

15. ಪರವಸು – ಅರವಸು ಎಂಬ ಪಾತ್ರಗಳು ಇರುವ ನಾಟಕ :

(1) ಮಹಾಚೈತ್ರ (2) ಅಗ್ನಿ ಮತ್ತು ಮಳೆ

(3) ಕುಂಟಾ – ಕುಂಟಾ ಕುರವತ್ತಿ (4) ಸಿರಿಸಂಪಿಗೆ

16. ಸಹಗಮನದ ವಿಚಾರ ಬರುವ ಶಾಸನ :

(1) ಆತಕೂರು ಶಾಸನ (2) ಶ್ರವಣಬೆಳಗೋಳದ ಬುಕ್ಕನ ಶಾಸನ

(3) ಲಕ್ಕುಂಡಿ ಶಾಸನ (4) ಜಿನವಲ್ಲಭನ ಶಾಸನ

17. ರಾಮಚಂದ್ರ ಚರಿತ ಪುರಾಣ ಕೃತಿಗೆ ಪ್ರೇರಣೆ :

(1) ಗುಣಭದ್ರಚಾರ್ಯ (2) ರವಿಷೇಣ (3) ಜಿನಸೇನ (4) ವಿಮಲಸೂರಿ

18. 'ನಿಂದಿರೆ ದಂಡಾಧೀಶಂ, ಕುಳ್ಳಿರೆ ಮಂತ್ರಿ, ತೊಡಂಕೆ ಕವಿ' ಆಗಿದ್ದವನು :

(1) ಜನ್ನ (2) ರತ್ನಾಕರವರ್ಣಿ (3) ರನ್ನ (4) ಹರಿಹರ

19. 'ತ್ರಿಲೋಕಶತಕ' ವನ್ನು ರಚಿಸಿದ ಕವಿ :

(1) ಹರಿಹರ (2) ರತ್ನಾಕರವರ್ಣಿ (3) ತೊರತಿ ನರಹರಿ (4) ಚಾಮರಸ

20. ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ 'ಗತಿಬಿಂಬ' ಪರಿಕಲ್ಪನೆಯನ್ನು ಮೊದಲು ಬಳಸಿದವರು :

(1) ಕುರ್ತಕೋಟಿ (2) ಜಿ.ಎಸ್. ಅಮೂರ್ (3) ಜಿ.ಎಸ್. ಶಿವರುದ್ರಪ್ಪ (4) ಕುವೆಂಪು

21. ಜಾನಪದ ಅಧ್ಯಯನದಲ್ಲಿ ಭೌಗೋಳಿಕ ವಿಧಾನದ ಆದ್ಯ ಪ್ರವರ್ತಕ :

(1) ವಿಲಿಯಂ ಡಾರ್ಸನ್ (2) ಲೌರಿ ಹಾಂಕೊ (3) ಡಬ್ಲ್ಯು.ಜೆ. ಥಾಂಮ್ಸ್ (4) ಜ್ಯೂಲಿಯಸ್ ಕ್ರಾಹ್ನಾ

22. ಗೋವಿಂದ ಪೈ ಯವರು ಉಲ್ಲೇಖಿಸಿದ, ಟಾಲೆಮಿಯು ಗುರುತಿಸಿದ ಕರ್ನಾಟಕದ ಸ್ಥಳ :

(1) ಮುದಗಲ್ಲು (2) ಕಂಪ್ಲಿ (3) ಬಳ್ಳಾರಿ (4) ಹಂಪಿ



www.examrace.com

23. ರಸ ಸಿದ್ಧಾಂತದ ಭಿನ್ನವಾದಗಳು ನಮಗೆ ಮೊದಲಿಗೆ ಕಂಡುಬರುವುದು :
(1) ರಸರತ್ನಾಕರದಲ್ಲಿ (2) ಅಭಿನವ ಭಾರತಿದಲ್ಲಿ
(3) ರಸಮಂಜರಿದಲ್ಲಿ (4) ಸಾಹಿತ್ಯ ದರ್ಪಣದಲ್ಲಿ

24. ಅಬರ್‌ಕ್ರೋಂಬಿ ಬರೆದ ಮೀಮಾಂಸೆಯ ಕೃತಿ :
(1) ಈಸ್ತೆಟಿಕ್ಸ್ ಅಂಡ್ ಪೊಯೆಟ್ರಿ (2) ಥಿಯರಿ ಆಫ್ ಕ್ರಿಟಿಸಿಸಂ
(3) ಪ್ರಿನ್ಸಿಪಲ್ಸ್ ಆಫ್ ಲಿಟರರಿ ಕ್ರಿಟಿಸಿಸಂ (4) ಪ್ರಾಕ್ಟೀಸ್ ಆಫ್ ಕ್ರಿಟಿಸಿಸಂ

25. ಇದು ಗಮಕ ಸಮಾಸಕ್ಕೆ ಉದಾಹರಣೆ :
(1) ಹಾಡುವ ತುಂಬಿ (2) ಹೂಳೆನೀರು (3) ಕಗ್ಗತ್ತಲೆ (4) ಅಂಗೈ

26. 'ಮುರರಿಪು ಧರ್ಮನಂದನ ಪದಾಬ್ಜಯುಗಕ್ಕೆ ಮರುತ್ಸುತಾದಿಗಳ್' – ಇಲ್ಲಿನ ಗಣವಿನ್ಯಾಸ ಈ ಛಂದಸ್ಸಿನದು :
(1) ಉತ್ಪಲಮಾಲೆ (2) ಚಂಪಕಮಾಲೆ (3) ಸ್ರಗ್ಧರೆ (4) ಮತ್ತೇಭವಿಕ್ರೀಡಿತ

27. ಇದೊಂದು ದ್ರಾವಿಡ ಭಾಷಾ ವೈಲಕ್ಷಣ್ಯ :
(1) ಗುಣವಾಚಕಗಳಿಗೆ ತರತಮ ಭಾವವುಂಟು
(2) ಕರ್ಮಣಿ ಪ್ರಯೋಗವಿದೆ
(3) ಕ್ರಿಯಾಪದಗಳಲ್ಲಿ ಪ್ರತ್ಯೇಕವಾದ ನಿಷೇಧ ಕ್ರಿಯಾರೂಪವಿಲ್ಲ
(4) ಎರಡು ವಚನಗಳಲ್ಲಿಯೂ ಒಂದೇ ವಿಧವಾದ ವಿಭಕ್ತಿ ಪ್ರತ್ಯಯಗಳು

28. 'ಶಾಸನಗಳಲ್ಲಿ ಶಿವಶರಣರು' ಕೃತಿಯ ಕರ್ತೃ :
(1) ಎಂ. ಚಿದಾನಂದಮೂರ್ತಿ (2) ಎನ್. ಬಸವಾರಾಧ್ಯ
(3) ಎಂ.ಎಂ. ಕಲಬುರ್ಗಿ (4) ಆರ್.ಸಿ. ಹಿರೇಮಠ

29. 'ಕನ್ನಡಿಯೊಳೆಷ್ಟು ಹಿಡಿಸೀತು ಕನಕಾಚಲವು
ಕೊಡಕೆ ಹಿಡಿಸೀತೆಷ್ಟು ಕಡಲನೀರು' – ಈ ಸಾಲುಗಳನ್ನು ಬರೆದ ಕವಿ :
(1) ಮಧುರಚೆನ್ನ (2) ಗೋಕಾಕ್
(3) ಕೆ.ಎಸ್. ನಿಸಾರ್ ಅಹಮದ್ (4) ಕೆ.ಎಸ್. ನರಸಿಂಹಸ್ವಾಮಿ


www.examrace.com

30. ಹಳೆಯ ಮೈಸೂರು ಪ್ರಾಂತ್ಯದ ರಾಜಸತ್ತೆಗೆ ನಿಷ್ಠೆಯನ್ನು ತೋರುವ ಕಾದಂಬರಿ :

(1) ಅರಮನೆ (2) ಮಾಡಿದ್ದುಣ್ಣೋ ಮಹಾರಾಯ

(3) ಶಾಂತಲಾ (4) ಸಿಂಗಾರೆವ್ವ ಮತ್ತು ಅರಮನೆ

31. 'ಹರಿನಾಮದರಗಿಣಿಯು ಹಾರುತಿದೆ ಜಗದಿ
ಪರಮ ಭಾಗವತರು ಬಲೆಯ ಬೀಸುವರು' – ಕೀರ್ತನೆಯ ಈ ಸಾಲಿನ ಕರ್ತೃ :

(1) ಶ್ರೀಪಾದರಾಯರು (2) ಕನಕದಾರು (3) ವ್ಯಾಸರಾಯರು (4) ಪುರಂದರದಾಸರು

32. 'ದುಷ್ಟ ಬುದ್ಧಿ' ಯ ಪಾತ್ರ ಬರುವ ಕನ್ನಡ ಕಾವ್ಯ :

(1) ವಡ್ಡಾರಾಧನೆ (2) ಹರಿಶ್ಚಂದ್ರ ಕಾವ್ಯ

(3) ಜೈಮಿನಿ ಭಾರತ (4) ಕುಮಾರವ್ಯಾಸ ಭಾರತ

33. 'ದಿ ಗ್ರೇಟ್ ಟ್ರೆಡಿಷನ್' ವಿಮರ್ಶಾ ಕೃತಿಯನ್ನು ಬರೆದ ವಿಮರ್ಶಕ :

(1) ಎಫ್.ಆರ್. ಲಿವೀಸ್ (2) ಐ.ಎ. ರಿಚರ್ಡ್ಸ್ (3) ಜಾರ್ಜ್ ಲುಕಾಚ್ಸ್ (4) ಎಜ್ರಾಪೌಂಕ್

34. ಇವರು ಲೌಕಿಕ ವೃತ್ತಿ ಗಾಯಕ ಪರಂಪರೆಗೆ ಸೇರಿದವರು :

(1) ಜುಂಜಪ್ಪನವರು (2) ಕರಪಾಲದವರು (3) ಗೊಂದಲಿಗರು (4) ಅಸಾದಿಗಳು

35. 'ದೀನಾರ', 'ದಮ್ಮ' ಈ ಗ್ರೀಕ್ ನಾಣ್ಯಗಳ ಹೆಸರು ಬಂದಿರುವ ಕನ್ನಡ ಕೃತಿಯ ಹೆಸರು :

(1) ವಿಕ್ರಮಾರ್ಜುನವಿಜಯ (2) ಕುಮಾರರಾಮ ಸಾಂಗತ್ಯ

(3) ಕೆಳದಿನೃಪವಿಜಯ (4) ವಡ್ಡಾರಾಧನೆ

36. ದಕ್ಷಿಣೋತ್ತರ ಮಾರ್ಗಗಳು ಕನ್ನಡದ ಯಾವ ಪ್ರಭೇದಗಳನ್ನು ಸೂಚಿಸುತ್ತವೆ ?

(1) ಪ್ರಾದೇಶಿಕ ಉಪಭಾಷೆ (2) ಸಂಸ್ಕೃತದ ಪ್ರಭಾವದಿಂದ ತೋರುವ ಭಿನ್ನರೂಪ

(3) ಶಿಷ್ಟ ಭಾಷೆಯ ಪ್ರಾದೇಶಿಕ ಪ್ರಭೇದ (4) ಸಾಮಾಜಿಕ ಉಪಭಾಷೆ

37. ಐದು ಮಾತ್ರೆಯ ಗಣಗಳಲ್ಲಿರುವ ಪ್ರಕಾರಗಳು :

(1) ಎಂಟು (2) ನಾಲ್ಕು (3) ಆರು (4) ಹನ್ನೆರಡು



www.examrace.com

38. ಕೌಮಾರಾವಸ್ಥೆಯ ಅಸ್ಪಷ್ಟ ಹಂಬಲಗಳು ಅಭಿವ್ಯಕ್ತಗೊಂಡ ಕವನ :

(1) ರಂಗೋಲಿ (2) ವರ್ಧಮಾನ (3) ಮಬ್ಬಿನಿಂದ ಮಬ್ಬಿಗೆ (4) ಮೆರವಣಿಗೆ

39. ಕನ್ನಡದಲ್ಲಿ 'ಶಬ್ದಗಾರುಡಿಗ' ಎಂದು ಹೆಸರಾದ ಕವಿ :

(1) ಕುವೆಂಪು (2) ಮಧುರಚೆನ್ನ (3) ಜಿ.ಎಸ್. ಶಿವರುದ್ರಪ್ಪ (4) ಬೇಂದ್ರೆ

40. ಮೂಲದ್ರಾವಿಡದ ಪದಾದಿಯಲ್ಲಿ ಘೋಷಧ್ವನಿಮಾತುಗಳು ಬಳಕೆಗೊಳ್ಳುತ್ತಿದ್ದವೆಂದು ಪ್ರತಿಪಾದಿಸಿದವರು :

(1) ರಾಬರ್ಟ್ ಕಾಲ್ಡ್‌ವೆಲ್ (2) ಭ. ಕೃಷ್ಣಮೂರ್ತಿ (3) ಜೂಲ್ಸ್ ಬ್ಲಾಕ್ (4) ಟಿ. ಬರೊ

**ಬಹು ಆಯ್ಕೆಯ ಮಾದರಿಯ ಪ್ರಶ್ನೆಗಳು :**

41. ಹಲ್ಮಿಡಿ ಶಾಸನದಲ್ಲಿ ಉಕ್ತವಾಗಿರುವ ಷಷ್ಠಿ ವಿಭಕ್ತಿ ಪ್ರತ್ಯಯಗಳು :

(i) ಭಟರಿಯಾ, ಇರ್ವರಾ (ii) ದೇಶದಾ, ಕಲಭೋರನಾ

(iii) ಏಟಿನೆಯಾ, ಇರ್ವರಾ (iv) ನರಕದಾ, ಕಲಭೋರನಾ

**ಇವುಗಳಲ್ಲಿ ಸರಿಯಾದ ಉತ್ತರ :**

(1) (i) ಮತ್ತು (iii) (2) (i) ಮತ್ತು (ii) (3) (ii) ಮತ್ತು (iii) (4) (ii) ಮತ್ತು (iv)

42. ಇವು ಗದ್ಯ ಗ್ರಂಥಗಳು :

(i) ಸಾಹಸ ಭೀಮ ವಿಜಯ (ii) ಚಾವುಂಡರಾಯಪುರಾಣ

(iii) ಚಕ್ರೇಶ್ವರ ಚರಿತೆ (iv) ವಡ್ಡಾರಾಧನೆ

**ಇವುಗಳಲ್ಲಿ ಸರಿಯಾದ ಉತ್ತರ :**

(1) (ii) ಮತ್ತು (iv) (2) (i) ಮತ್ತು (ii) (3) (ii) ಮತ್ತು (iii) (4) (i) ಮತ್ತು (iii)

43. ರಸಾಭಿವ್ಯಕ್ತಿಯಲ್ಲಿ ಅಡ್ಡಿಮಾಡುವ ಸಪ್ತ ವಿಘ್ನಗಳು :

(i) ದೇಶಕಾಲ ವಿಶೇಷಾವೇಶ, ಸ್ಥುಟತ್ವಭಾವ (ii) ಅಪ್ರಧಾನತಾ, ಸಂಶಯಯೋಗ

(iii) ರಸಾವೇಶ, ಸಂಭಾವನಾವಿರಹ (iv) ಧ್ವನಿಪ್ರಾಮುಖ್ಯತೆ, ಅಪ್ರಧಾನತಾ

**ಇವುಗಳಲ್ಲಿ ಸರಿಯಾದ ಉತ್ತರ :**

(1) (i) ಮತ್ತು (iii) (2) (ii) ಮತ್ತು (iii) (3) (ii) ಮತ್ತು (iv) (4) (i) ಮತ್ತು (ii)



www.examrace.com

44. ತೆಂಕುತಿಟ್ಟು ಯಕ್ಷಗಾನದಲ್ಲಿ ಬಳಕೆಯಾಗುವ ವಾದ್ಯಗಳು :

(i) ತಾಳ (ii) ಜಾಗಟೆ (iii) ಚಂಡೆ (iv) ಮುಖವೀಣೆ

**ಇವುಗಳಲ್ಲಿ ಸರಿಯಾದ ಉತ್ತರ :**

(1) (i) ಮತ್ತು (ii) (2) (ii) ಮತ್ತು (iv) (3) (ii) ಮತ್ತು (iii) (4) (i) ಮತ್ತು (iv)

45. ಎಜ್ರಾಪೌಂಡನು ಕಾವ್ಯ ಭಾಷೆಯಲ್ಲಿ ಕೊಟ್ಟ ಅಂಶ :

(i) ವಿಶಿಷ್ಟತೆಗೆ ಒತ್ತು ಕೊಟ್ಟದ್ದು (ii) ಮೂರ್ತತೆಗೆ ಒತ್ತು ಕೊಟ್ಟದ್ದು

(iii) ಕಲ್ಪನೆಗೆ ಒತ್ತು ಕೊಟ್ಟದ್ದು (iv) ಕೊತ್ಯೂಂಟಿಕರ ಮಾದರಿಗೆ ಒತ್ತು ಕೊಟ್ಟದ್ದು

**ಇವುಗಳಲ್ಲಿ ಸರಿಯಾದ ಉತ್ತರ :**

(1) (i) ಮತ್ತು (iii) (2) (i) ಮತ್ತು (ii)

(3) (ii) ಮತ್ತು (iv) (4) (ii) ಮತ್ತು (iii)

46. ಇವು ಸಾಂಗತ್ಯ ಕಾವ್ಯಗಳು :

(i) ಪರಮಾನುಭವ ಬೋಧೆ (ii) ಚನ್ನಬಸವ ಪುರಾಣ

(iii) ಕಂಠೀರವ ನರಸರಾಜ ವಿಜಯ (iv) ರಾಜಶೇಖರ ವಿಳಾಸ

**ಇವುಗಳಲ್ಲಿ ಸರಿಯಾದ ಉತ್ತರ :**

(1) (i) ಮತ್ತು (iii) (2) (i) ಮತ್ತು (ii)

(3) (ii) ಮತ್ತು (iii) (4) (ii) ಮತ್ತು (iv)

47. ದ್ರಾವಿಡ ಭಾಷಾ ಅಧ್ಯಯನಕ್ಕೆ ಮಹತ್ವದ ಕೊಡುಗೆ ನೀಡಿದವರು :

(i) ಗುಂಡ್‌ರ್ಟ್ ; ಬ್ಲೂಮೂಫೀಲ್ಡ್ (ii) ಎಂ.ಬಿ. ಎಮಿನೊ ; ಟಿ. ಬರೊ

(iii) ರೆವರೆಂಡ್ ಕಿಟೆಲ್ ; ಭ. ಕೃಷ್ಣಮೂರ್ತಿ (iv) ಎಡ್ವರ್ಡ್‌ಸಫೀರ್ ; ಮೀನಾಕ್ಷಿಸುಂದರಂ

**ಇವುಗಳಲ್ಲಿ ಸರಿಯಾದ ಉತ್ತರ :**

(1) (i) ಮತ್ತು (ii) (2) (ii) ಮತ್ತು (iv) (3) (ii) ಮತ್ತು (iii) (4) (i) ಮತ್ತು (iii)

48. ಇವು ಕನ್ನಡದ ಸಣ್ಣ ಕಥಾಸಂಕಲನಗಳು :

(i) ಹಿಂತಿರುಗಿ ನೋಡಿದಾಗ (ii) ಸಿದ್ಧಾರ್ಥ

(iii) ದಂಡೆ (iv) ಮುಚ್ಚಿದ ಬಾಗಿಲು

**ಇವುಗಳಲ್ಲಿ ಸರಿಯಾದ ಉತ್ತರ :**

(1) (ii) ಮತ್ತು (iv) (2) (i) ಮತ್ತು (ii) (3) (i) ಮತ್ತು (iv) (4) (ii) ಮತ್ತು (iii)



www.examrace.com

49. ಇವು ಮನೋವಿಶ್ಲೇಷಣಾತ್ಮಕ ಕಾದಂಬರಿಗಳು :

(i) ಅಂತರಂಗ (ii) ಶರಪಂಜರ (iii) ಉಯ್ಯಾಲೆ (iv) ಸಂಧ್ಯಾರಾಗ

**ಇವುಗಳಲ್ಲಿ ಸರಿಯಾದ ಉತ್ತರ :**

(1) (i) ಮತ್ತು (iii) (2) (i) ಮತ್ತು (ii) (3) (ii) ಮತ್ತು (iii) (4) (ii) ಮತ್ತು (iv)

50. ಇವುಗಳು ಅನುವಾದಿತ ಕಾದಂಬರಿಗಳು :

(i) ಸ್ವಾತಂತ್ರ್ಯದೆಡೆಗೆ (ii) ಸಾಕ್ಷಿ (iii) ಅನಾಥಪಕ್ಷಿ (iv) ವರದಾನ

**ಇವುಗಳಲ್ಲಿ ಸರಿಯಾದ ಉತ್ತರ :**

(1) (iii) ಮತ್ತು (iv) (2) (i) ಮತ್ತು (iii) (3) (i) ಮತ್ತು (ii) (4) (ii) ಮತ್ತು (iv)

**ಹೇಳಿಕೆ – ವಿವರಣೆ ಆಧಾರಿತ ಬಹು ಆಯ್ಕೆಯ ಮಾದರಿ.**

51. **ಹೇಳಿಕೆ :** ಬಿಸರುಹೋದ್ಭವ ಗಣಂ ರಸದಶಸ್ಥಾನದೊಳ್
ಬಿಸರುಹ ನೇತ್ರಗಣಮೆ ಬರ್ಕುಳಿದುವು.

**ವಿವರಣೆ :** ಒಂಬತ್ತನೇ ಮತ್ತು ಹತ್ತನೇ ಸ್ಥಾನದಲ್ಲಿ ವಿಷ್ಣುಗಣಗಳು ಬರುತ್ತವೆ. ಉಳಿದೆಡೆಗಳಲ್ಲಿ ಬ್ರಹ್ಮಗಣಗಳು ಬರುತ್ತದೆ.

(1) ಹೇಳಿಕೆ ಸರಿ ; ವಿವರಣೆ ಸರಿ (2) ಹೇಳಿಕೆ ತಪ್ಪು ; ವಿವರಣೆ ಸರಿ

(3) ಹೇಳಿಕೆ ಸರಿ ; ವಿವರಣೆ ತಪ್ಪು (4) ಹೇಳಿಕೆ ತಪ್ಪು ; ವಿವರಣೆ ತಪ್ಪು

52. **ಹೇಳಿಕೆ :** ಎಸಗಲ್ಗಾಳಿ ಪುಗಲ್ತಂಗಕಿರಣಂ, ಸಾರಲ್ಮಿಗಂ
ಪಾರಲಾಗಸದೊಳ್ಪಕ್ಕಿಗಳಲ್ಲಿ ಸಲ್ಲವು.

**ವಿವರಣೆ :** ಗಾಳಿ, ಚಂದ್ರನ ಕಿರಣ ಹಾಗೂ ಹಾರುವ ಹಕ್ಕಿಗಳು ಆಕಾಶದಲ್ಲಿ ಹೋಗಲಾರವು.

(1) ಹೇಳಿಕೆ ತಪ್ಪು ; ವಿವರಣೆ ಸರಿ (2) ಹೇಳಿಕೆ ತಪ್ಪು ; ವಿವರಣೆ ತಪ್ಪು

(3) ಹೇಳಿಕೆ ಸರಿ ; ವಿವರಣೆ ಸರಿ (4) ಹೇಳಿಕೆ ಸರಿ ; ವಿವರಣೆ ತಪ್ಪು

53. **ಹೇಳಿಕೆ :** ನಗಿಯಲ್ಲಿ ಹೊಗಿಬ್ಯಾಡ ; ಹೊಗಿಹಿಂದ ಧಗಿ ಬ್ಯಾಡ
ಬಾಳಿಗೆ ಎರಡು ಬಗಿಬ್ಯಾಡ ; ನನ ಗೆಣೆಯಾ.

**ವಿವರಣೆ :** ನಗೆಯೊಳಗೆ ಮುಳುಗಬಾರದು ; ಒಳಹೊಕ್ಕು ಉರಿಯಬಾರದು. ಜೀವನಕ್ಕೆ ಎರಡು ದಾರಿ ಬೇಡ ; ನನ್ನ ಗೆಳೆಯಾ.

(1) ಹೇಳಿಕೆ ತಪ್ಪು ; ವಿವರಣೆ ಸರಿ (2) ಹೇಳಿಕೆ ಸರಿ ; ವಿವರಣೆ ತಪ್ಪು

(3) ಹೇಳಿಕೆ ತಪ್ಪು ; ವಿವರಣೆ ತಪ್ಪು (4) ಹೇಳಿಕೆ ಸರಿ ; ವಿವರಣೆ ಸರಿ

54. **ಹೇಳಿಕೆ :** 'ನವನವೋನ್ಮೇಷ ಶಾಲಿನೀ ಪ್ರತಿಭಾಮತಾ'

**ವಿವರಣೆ :** 'ಪ್ರತಿಭೆಯು ಹೊಸಹೊಸದನ್ನು ಸ್ಫುರಿಸುವಂತೆ ಮಾಡಲು ಸಾಮರ್ಥ್ಯವುಳ್ಳದ್ದು ಎನ್ನುವುದು ಅಭಿಪ್ರಾಯ'

(1) ಹೇಳಿಕೆ ಸರಿ ; ವಿವರಣೆ ಸರಿ (2) ಹೇಳಿಕೆ ತಪ್ಪು ; ವಿವರಣೆ ಸರಿ

(3) ಹೇಳಿಕೆ ಸರಿ ; ವಿವರಣೆ ತಪ್ಪು (4) ಹೇಳಿಕೆ ತಪ್ಪು ; ವಿವರಣೆ ತಪ್ಪು



www.examrace.com

55. **ಹೇಳಿಕೆ :** ಬಡಿಗಂಡನಿಲ್ಲ, ಪಾಲಂ ಕಂಡಂ.

**ವಿವರಣೆ :** ಬಡಿಯುವ ಗಂಡನಿಲ್ಲ ; ಪಾಲಿಸುವವನನ್ನೇ ಕಂಡನು.

(1) ಹೇಳಿಕೆ ಸರಿ ; ವಿವರಣೆ ಸರಿ
(2) ಹೇಳಿಕೆ ತಪ್ಪು ; ವಿವರಣೆ ತಪ್ಪು
(3) ಹೇಳಿಕೆ ಸರಿ ; ವಿವರಣೆ ತಪ್ಪು
(4) ಹೇಳಿಕೆ ತಪ್ಪು ; ವಿವರಣೆ ಸರಿ

**ಬಹು ಆಯ್ಕೆಯ ಜೋಡಣೆಯ ಮಾದರಿ.**

56. (a) ಸರಸ (i) ವಿಷ್ಣುಗಣ
(b) ಸರಾಗ (ii) ಬ್ರಹ್ಮಗಣ
(c) ಮಾರ್ತಾಂಡ (iii) ರುದ್ರಗಣ
(d) ಶ್ರೀನಿವಾಸ (iv) ಚತುರ್ಮಾತ್ರಾಗಣ
(v) ಮಗಣ

**ಇದಕ್ಕೆ ಸರಿಯಾದ ಉತ್ತರ :**

| | (a) | (b) | (c) | (d) |
|---|---|---|---|---|
| (1) | (ii) | (iii) | (iv) | (i) |
| (2) | (ii) | (i) | (iv) | (iii) |
| (3) | (iii) | (i) | (ii) | (iv) |
| (4) | (ii) | (iv) | (i) | (iii) |

57. (a) ಕಾದೆರೆದುಪೆತ್ತಜಯನ್ (i) ಆತಕೂರು
(b) ಪಡುವಣದೆಸೆಯೊಳ್ ಮೊರಡಿಯೊಳ್ (ii) ಹಲ್ಮಿಡಿ
(c) ಧಲ್ಲಂಗಂ ಸಿಗಳ್ದಾಹವಮಲ್ಲಂಗಂ ಭೇದಮುಂಟೆ (iii) ದೇಕಬ್ಬೆ
(d) ರವಿಗಂ ಪುಟ್ಟಿದೊಡನುದ್ಭವಮಾಯ್ತು ಅರಿವು (iv) ಅತ್ತಿಮಬ್ಬೆ
(v) ಕುವರಲಕ್ಷ್ಮನವೀರಗಲ್ಲು

**ಇದಕ್ಕೆ ಸರಿಯಾದ ಉತ್ತರ :**

| | (a) | (b) | (c) | (d) |
|---|---|---|---|---|
| (1) | (ii) | (iv) | (i) | (iii) |
| (2) | (ii) | (i) | (iv) | (iii) |
| (3) | (iv) | (i) | (iii) | (ii) |
| (4) | (i) | (ii) | (iv) | (iii) |


www.examrace.com

58. (a) ಸಾಹಿತ್ಯಕ ಬಗೆ (i) ಮಾತು, ಗಾದೆ, ಒಗಟು
(b) ಭಾಷಿಕ ಬಗೆ (ii) ಸಂಗೀತ, ನೃತ್ಯ, ಆಟ
(c) ವೈಜ್ಞಾನಿಕ ಬಗೆ (iii) ಪುರಾಣ, ಐತಿಹ್ಯ
(d) ಕ್ರಿಯಾತ್ಮಕ ಬಗೆ (iv) ಹೆಸರುಗಳು, ಉಚ್ಚಾರಣೆಗಳು
(v) ಭವಿಷ್ಯ, ಮಾಟ

**ಇದಕ್ಕೆ ಸರಿಯಾದ ಉತ್ತರ :**

| | (a) | (b) | (c) | (d) |
|---|---|---|---|---|
| (1) | (iii) | (i) | (v) | (ii) |
| (2) | (iii) | (v) | (ii) | (i) |
| (3) | (v) | (iii) | (i) | (ii) |
| (4) | (i) | (iv) | (v) | (ii) |

59. (a) ಪಂಪ (i) ಯಮಸುತನಿಂಬುಕೆಯ್ವನೆಮಗೆ
(b) ರಾಘವಾಂಕ (ii) ಇದುವೆ ಮಹಾಭಾರತಕ್ಕಾದಿಯಾಯ್ತು
(c) ರನ್ನ (iii) ಕೋಣನೆರಡುಂ ಹೋರೆ ಗಿಡುವಿಂಗೆಮಿತ್ತು
(d) ಹರಿಹರ (iv) ಬೆರೆಸಲಣ್ಣ ತಣ್ಣೀರೊಳವೆ
(v) ಹೊರಗೆಮುಳ್ಳು ಒಳಗೆಕಂಪು, ಅಕ್ಕಕ್ಕು ನಿನ್ನ ಪರಿ

**ಇವುಗಳಲ್ಲಿ ಸರಿಯಾದ ಉತ್ತರ :**

| | (a) | (b) | (c) | (d) |
|---|---|---|---|---|
| (1) | (i) | (iv) | (v) | (ii) |
| (2) | (ii) | (iii) | (i) | (v) |
| (3) | (ii) | (i) | (iii) | (iv) |
| (4) | (v) | (ii) | (iii) | (i) |

60. (a) ಒಡಲ ಕಳವಳಕ್ಕಾಗಿ ಅಡವಿಯ ಹೊಕ್ಕೆನು (i) ಅಲ್ಲಮ
(b) ಅವಳ ವಚನ ಬೆಲ್ಲದಂತೆ, ಹೃದಯದಲ್ಲಿಪ್ಪುದು ನಂಜು ಕಂಡಯ್ಯಾ (ii) ಅಕ್ಕಮಹಾದೇವಿ
(c) ವಾರಿಕಲ್ಲ ಪುತ್ಥಳಿಯನಪ್ಪಿಕೊಂಡಂತಾಯಿತ್ತು (iii) ಬಸವಣ್ಣ
(d) ಹೊಲೆಯರ ಬಾವಿಯಲೊಂದು ಎಲುನೆಟ್ಟಿದ್ದರೆ (iv) ಸಿದ್ಧರಾಮ
(v) ಜೇಡರ ದಾಸಿಮಯ್ಯ

**ಇವುಗಳಲ್ಲಿ ಸರಿಯಾದ ಉತ್ತರ :**

| | (a) | (b) | (c) | (d) |
|---|---|---|---|---|
| (1) | (iii) | (ii) | (i) | (iv) |
| (2) | (ii) | (i) | (iii) | (v) |
| (3) | (ii) | (iii) | (i) | (v) |
| (4) | (i) | (ii) | (iii) | (iv) |


www.examrace.com

61. (a) ಕೆ.ಎಸ್. ನರಸಿಂಹಸ್ವಾಮಿ
(b) ಜಿ.ಎಸ್. ಶಿವರುದ್ರಪ್ಪ
(c) ಅಂಬಿಕಾತನಯದತ್ತ
(d) ಚನ್ನವೀರಕಣವಿ

(i) ಈ ಕಾಲನೆಂಬುವ ಪ್ರಾಣಿ ಕೈಗೆ ಸಿಕ್ಕರೆ ಚೆನ್ನಾಗಿ ಥಳಿಸಬೇಕೆಂದಿದ್ದೆ
(ii) ದಿಗುತಟದಲ್ಲಿ ತೆರೆಯುತ್ತಿತ್ತು ಹಗಲಿನಾಕ್ಷಿ
(iii) ನನ್ನವರು ಇರಬಹುದು, ಸ್ನೇಹಿತರೂ ಇದ್ದಾರು ! ಬಲ್ಲವರು : ಯಾರವರು ? ತಣ್ಣಗಿರಲಿ
(iv) ವೇದಾಂತಿ ಹೇಳಿದನು, ಹೊನ್ನೆಲ್ಲ ಮಣ್ಣು !
(v) ಊರ ತುದಿಯ, ಆ ಮೂರು ಬಟ್ಟೆ ಮುಗಿದಲ್ಲಿ ಕೊಳ್ಳವೆಲ್ಲಿ ?

**ಇವುಗಳಿಗೆ ಸರಿಯಾದ ಉತ್ತರ :**

| | (a) | (b) | (c) | (d) |
|---|---|---|---|---|
| (1) | (i) | (iii) | (iv) | (v) |
| (2) | (iv) | (i) | (iii) | (ii) |
| (3) | (iii) | (iv) | (i) | (v) |
| (4) | (iii) | (iv) | (v) | (i) |

62. (a) ವೃತ್ತಿ
(b) ರೀತಿ
(c) ಗರ್ವ
(d) ಹಾಸ

(i) ಸಂಚಾರಿ ಭಾವ
(ii) ಸ್ಥಾಯೀ ಭಾವ
(iii) ಪಾಕ
(iv) ವ್ಯಂಜನಾ
(v) ವೈದರ್ಭಿ

**ಇವುಗಳಿಗೆ ಸರಿಯಾದ ಉತ್ತರ :**

| | (a) | (b) | (c) | (d) |
|---|---|---|---|---|
| (1) | (iv) | (v) | (i) | (ii) |
| (2) | (iv) | (i) | (v) | (ii) |
| (3) | (i) | (iii) | (ii) | (v) |
| (4) | (ii) | (i) | (iii) | (iv) |

63. (a) ಸುಗುಣ ಗಂಭೀರ
(b) ಅವ್ವ
(c) ದಾರಿಯಾವುದಯ್ಯಾ ವೈಕುಂಠಕೆ
(d) ಉಂಡಾಡಿಗುಂಡ

(i) ಶ್ರೀರಂಗ
(ii) ಚಂದ್ರಕಾಂತ ಕುಸನೂರ
(iii) ಪರ್ವತವಾಣಿ
(iv) ಚಂದ್ರಶೇಖರ ಪಾಟೀಲ
(v) ಪಂಪ

**ಇವುಗಳಿಗೆ ಸರಿಯಾದ ಉತ್ತರ :**

| | (a) | (b) | (c) | (d) |
|---|---|---|---|---|
| (1) | (iv) | (i) | (iii) | (ii) |
| (2) | (v) | (iv) | (i) | (iii) |
| (3) | (v) | (i) | (iv) | (iii) |
| (4) | (iv) | (v) | (i) | (iii) |


www.examrace.com

64. (a) ತಮಿಳು (i) ಒಯ್ಂಬದಿ
(b) ತೆಲುಗು (ii) ಒಂಬತ್ತು
(c) ತುಳು (iii) ಒನ್‌ಬದು
(d) ಕೊಡಗು (iv) ತೊಮ್ಮಿದಿ
(v) ಒರ್ಂಬ

**ಇವುಗಳಿಗೆ ಸರಿಯಾದ ಉತ್ತರ :**

| | **(a)** | **(b)** | **(c)** | **(d)** |
|---|---|---|---|---|
| (1) | (i) | (ii) | (iv) | (v) |
| (2) | (iii) | (iv) | (i) | (v) |
| (3) | (iii) | (iv) | (v) | (i) |
| (4) | (iv) | (iii) | (i) | (v) |

65. (a) ಆರ್. ನರಸಿಂಹಾಚಾರ್ (i) ಕನ್ನಡ ಚಿತ್ರಕಾವ್ಯ
(b) ಜಿ.ಎಸ್. ಅಮೂರ (ii) ಉತ್ತರಾರ್ಧ
(c) ಜಿ.ಎಚ್. ನಾಯಕ್ (iii) ಕರ್ನಾಟಕ ಶಬ್ದಾನುಶಾಸನ
(d) ವೆಂಕಟಾಚಲಶಾಸ್ತ್ರಿ (iv) ಸಮಾರಾಧನ
(v) ಸಾಹಿತ್ಯವಿಮರ್ಶೆಯ ಮೂಲತತ್ವಗಳು

**ಇವುಗಳಿಗೆ ಸರಿಯಾದ ಉತ್ತರ :**

| | **(a)** | **(b)** | **(c)** | **(d)** |
|---|---|---|---|---|
| (1) | (iii) | (iv) | (i) | (ii) |
| (2) | (iv) | (iii) | (v) | (i) |
| (3) | (ii) | (i) | (iv) | (iii) |
| (4) | (iii) | (iv) | (ii) | (i) |

66. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುತ್ತದೆ ?
(1) ಭೋಜರಾಜ – ನಾಟಕ
(2) ಕುಂದರನಾಡಿನ ಕಂದ – ಸಣ್ಣ ಕತೆ
(3) ಅನ್ವೇಷಣೆ – ಪ್ರಬಂಧ
(4) ಶ್ವೇತಾಂಬರಿ – ಕಾದಂಬರಿ


www.examrace.com

67. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಾಣಿಕೆಯಾಗುವುದಿಲ್ಲ ?

(1) ಡಿ.ಕೆ. ಭೀಮಸೇನರಾವ್ – ಶಬ್ದಮಣಿದರ್ಪಣ

(2) ಎಂ.ಎಸ್. ಸುಂಕಾಪುರ – ಜಾನಪದ

(3) ಗಳಗನಾಥ – ಅನುವಾದ

(4) ವಿ.ಎಂ. ಇನಾಮ್‌ದಾರ – ನಾಟಕ

68. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಾಣಿಕೆಯಾಗುತ್ತದೆ ?

(1) ಭಾಷಾಂತರ ಸ್ವೀಕರಣ – ಹಂಸಗೀತೆ, ಕೊರಳುಪಟ್ಟಿ

(2) ತದ್ಭವ – ಮನೆ, ಹಾವು

(3) ಅನ್ಯದೇಶ್ಯ – ತವಸಿ, ಹದಿಬದೆ

(4) ದೇಶ್ಯ – ಆಸ್ಪತ್ರೆ, ಅಂಬುಲೆನ್ಸ್

69. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಾಣಿಕೆಯಾಗುದಿಲ್ಲ ?

(1) ಸ್ತ್ರೀವಾದಿ ವಿಮರ್ಶೆ – ವೀಣಾ ಶಾಂತೇಶ್ವರ

(2) ರೂಪನಿಷ್ಠ ವಿಮರ್ಶೆ – ಎಂ.ಜಿ. ಕೃಷ್ಣಮೂರ್ತಿ

(3) ಮಾರ್ಕ್ಸ್‌ವಾದಿ ವಿಮರ್ಶೆ – ಜಾರ್ಜ್ ಲುಕಾಚ್ಸ್

(4) ರೋಮ್ಯಾಂಟಿಕ್ ವಿಮರ್ಶೆ – ಕುವೆಂಪು

70. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಾಣಿಕೆಯಾಗುತ್ತದೆ ?

(1) ಕೆ.ಎಸ್. ನರಸಿಂಹಸ್ವಾಮಿ – ಶಾರದೆ

(2) ಗೋಕಾಕ್ – ದಾಳಿಂಬೆ

(3) ಜಿ.ಎಸ್. ಶಿವರುದ್ರಪ್ಪ – ಭೀಮಾಲಾಪ

(4) ಮಧುರಚೆನ್ನ – ಕಲ್ಪವೃಕ್ಷ ವೃಂದಾವನಂಗಳಲ್ಲಿ

**ಅನುಕ್ರಮ ಮಾದರಿ ಪ್ರಶ್ನೆಗಳು :**

**ಈ ಕೆಳಗಿನವುಗಳಲ್ಲಿ ಸರಿಯಾದ ಕಾಲಾನುಕ್ರಮಣಿಕೆಯನ್ನು ಗುರುತಿಸಿ.**

71. (1) ಲಕ್ಕುಂಡಿ ಶಾಸನ, ಆತಕೂರು ಶಾಸನ, ನಾಗಾಯಿ ಶಾಸನ, ಕುವರಲಕ್ಷ್ಮಣನ ವೀರಗಲ್ಲು

(2) ಆತಕೂರು ಶಾಸನ, ಲಕ್ಕುಂಡಿ ಶಾಸನ, ನಾಗಾಯಿ ಶಾಸನ, ಕುವರಲಕ್ಷ್ಮಣನ ವೀರಗಲ್ಲು

(3) ನಾಗಾಯಿ ಶಾಸನ, ಕುವರಲಕ್ಷ್ಮಣನ ವೀರಗಲ್ಲು, ಲಕ್ಕುಂಡಿ ಶಾಸನ, ಆತಕೂರು ಶಾಸನ

(4) ಆತಕೂರು ಶಾಸನ, ಕುವರಲಕ್ಷ್ಮಣನ ವೀರಗಲ್ಲು, ಲಕ್ಕುಂಡಿ ಶಾಸನ, ನಾಗಾಯಿ ಶಾಸನ



www.examrace.com

72. (1) ಕನ್ನಡ ಕೈಪಿಡಿ, ಹೊಸಗನ್ನಡ ಸಾಹಿತ್ಯ ಚರಿತ್ರೆ, ಭಾರತೀಯ ಕಾವ್ಯಮೀಮಾಂಸೆ, ತೌಲನಿಕ ಕಾವ್ಯಮೀಮಾಂಸೆ
(2) ಹೊಸಗನ್ನಡ ಸಾಹಿತ್ಯ ಚರಿತ್ರೆ, ತೌಲನಿಕ ಕಾವ್ಯಮೀಮಾಂಸೆ, ಭಾರತೀಯ ಕಾವ್ಯಮೀಮಾಂಸೆ, ಕನ್ನಡ ಕೈಪಿಡಿ
(3) ಭಾರತೀಯ ಕಾವ್ಯಮೀಮಾಂಸೆ, ಕನ್ನಡ ಕೈಪಿಡಿ, ತೌಲನಿಕ ಕಾವ್ಯಮೀಮಾಂಸೆ, ಹೊಸಗನ್ನಡ ಸಾಹಿತ್ಯ ಚರಿತ್ರೆ
(4) ಕನ್ನಡ ಕೈಪಿಡಿ, ಭಾರತೀಯ ಕಾವ್ಯಮೀಮಾಂಸೆ, ಹೊಸಗನ್ನಡ ಸಾಹಿತ್ಯ ಚರಿತ್ರೆ, ತೌಲನಿಕ ಕಾವ್ಯಮೀಮಾಂಸೆ

73. (1) ಜೀವನ ಸಂಗೀತ, ಜಾನಪದ ಸ್ವರೂಪ, ಪಟ್ಟೋಲೆ ಪಳಮೆ, ಜನತಾ ಗೀತೆಗಳು
(2) ಜೀವನ ಸಂಗೀತ, ಪಟ್ಟೋಲೆ ಪಳಮೆ, ಜಾನಪದ ಸ್ವರೂಪ, ಜನತಾ ಗೀತೆಗಳು
(3) ಪಟ್ಟೋಲೆ ಪಳಮೆ, ಜೀವನ ಸಂಗೀತ, ಜನತಾ ಗೀತೆಗಳು, ಜಾನಪದ ಸ್ವರೂಪ
(4) ಪಟ್ಟೋಲೆ ಪಳಮೆ, ಜನತಾ ಗೀತೆಗಳು, ಜಾನಪದ ಸ್ವರೂಪ, ಜೀವನ ಸಂಗೀತ

74. (1) ಅಜಿತಪುರಾಣ, ಯಶೋಧರ ಚರಿತೆ, ಪ್ರಭುಲಿಂಗಲೀಲೆ, ಅಪರಾಜಿತೇಶ್ವರ ಶತಕ
(2) ಯಶೋಧರ ಚರಿತೆ, ಅಜಿತಪುರಾಣ, ಪ್ರಭುಲಿಂಗಲೀಲೆ, ಅಪರಾಜಿತೇಶ್ವರ ಶತಕ
(3) ಅಜಿತಪುರಾಣ, ಪ್ರಭುಲಿಂಗಲೀಲೆ, ಯಶೋಧರ ಚರಿತೆ, ಅಪರಾಜಿತೇಶ್ವರ ಶತಕ
(4) ಪ್ರಭುಲಿಂಗಲೀಲೆ, ಅಪರಾಜಿತೇಶ್ವರ ಶತಕ, ಯಶೋಧರ ಚರಿತೆ, ಅಜಿತಪುರಾಣ

75. (1) ಅರಿಸ್ಟಾಟಲ್, ಲಾಂಜಿನಸ್, ಭರತ, ಭಾಮಹ
(2) ಅರಿಸ್ಟಾಟಲ್, ಭರತ, ಲಾಂಜಿನಸ್, ಭಾಮಹ
(3) ಭರತ, ಅರಿಸ್ಟಾಟಲ್, ಭಾಮಹ, ಲಾಂಜಿನಸ್
(4) ಲಾಂಜಿನಸ್, ಅರಿಸ್ಟಾಟಲ್, ಭಾಮಹ, ಭರತ

- o 0 o -


www.examrace.com

**Space For Rough Work**

Exam Race



www.examrace.com